ನಮ್ಮಲ್ಲಿ ಆತ್ಮವಿಶ್ವಾಸವನ್ನು ಮೂಡಿಸುವುದಿಲ್ಲ ಎಂಬುದನ್ನು ನೆನಪಿನಲ್ಲಿ ಇಡಬೇಕು. ವಾಸ್ತವವಾಗಿ ಅಹಂಕಾರವು ಮನುಷ್ಯನ ಅಂತಃಶಕ್ತಿಯನ್ನು ಹೆಚ್ಚಿಸುವ ಬದಲು, ಅದನ್ನು ನಿರ್ನಾಮ ಮಾಡುತ್ತದೆ. ನಿಜವಾಗಿ ಆತ್ಮವಿಶ್ವಾಸವುಳ್ಳ ವ್ಯಕ್ತಿಯು ಬಾಹ್ಯದಲ್ಲಿ ನಿರಹಂಕಾರಿಯಾಗಿರುತ್ತಾನೆ.

### ಚಾರಿತ್ರ್ಯದ ಮಹತ್ವ

ಒಂದು ಇಂಗ್ಲಿಷ್ ಗಾದೆ ಹೀಗೆ ಹೇಳುತ್ತದೆ: "ಹಣ ನಾಶವಾದರೆ, ಏನೂ ಕಳೆದುಹೋಗಿಲ್ಲ ಎಂದೇ ಹೇಳಬೇಕು; ಆರೋಗ್ಯ ಹಾಳಾದರೆ, ಏನೋ ಸ್ವಲ್ಪ ಕಳೆದುಹೋಗಿದೆ ಎನ್ನಬಹುದು; ಆದರೆ ಚಾರಿತ್ರ್ಯಹಾನಿಯಾದರೆ, ಸರ್ವಸ್ವವೂ ಕಳೆದುಹೋಗಿದೆ ಎಂದೇ ಹೇಳಬೇಕು." ಸನ್ನಡತೆ ಅಥವಾ ಶೀಲ ಎನ್ನುವುದು ವ್ಯಕ್ತಿಗೆ ಪ್ರಾಣಕ್ಕೆ ಸಮಾನವಾದುದು. ಅದು ಇಲ್ಲದಿದ್ದರೆ ಅವನು ನಡೆದಾಡುವ ಶವಕ್ಕೆ ಸಮಾನನಾಗಿಬಿಡುತ್ತಾನೆ. ಜೀವನಕ್ಕೆ ಶೋಭೆ ತರುವ, ಅದಕ್ಕೆ ಅನುಪಮ ಸೌಂದರ್ಯವನ್ನು ಕೊಡುವ ಅಂಶವೇ ಈ ಚಾರಿತ್ರ್ಯ. ಚಾರಿತ್ರ್ಯವೆಂಬುದು ಜೀವನದ ಅಂಧಕಾರಮಯ ಕ್ಷಣಗಳಲ್ಲಿ ವ್ಯಕ್ತಿಗೆ ದಾರಿ ತೋರುವ ಬೆಳಕು; ಪ್ರಲೋಭನೆಗಳ ಬಿರುಗಾಳಿಯನ್ನು ತಡೆಯುವ ಬಂಡೆಗಲ್ಲು. ಅದು ವ್ಯಕ್ತಿಯ ಮೌಲ್ಯಾಧಾರಿತ ಬದುಕಿನ ಮಹತ್ವವನ್ನು ಪರೀಕ್ಷಿಸುವ ಒರೆಗಲ್ಲು. ವ್ಯಕ್ತಿಯ ಶ್ರೇಷ್ಠತೆ, ಹಿರಿಮೆ, ಅವನ ಸದ್ಗುಣ – ಇವೆಲ್ಲವೂ ಅವನ ಚಾರಿತ್ರ್ಯದ ಮೇಲೆಯೇ ನಿಂತಿರುತ್ತವೆ. ಅಧಿಕಾರ ಯಾವ ವ್ಯಕ್ತಿಯನ್ನೂ ಶ್ರೇಷ್ಠನನ್ನಾಗಿ ಮಾಡುವುದಿಲ್ಲ. ಅಧಿಕಾರದಿಂದ ಪ್ರಾಪ್ತವಾಗುವ ಘನತೆ ಕ್ಷಣಿಕವಾದುದು. ಅಧಿಕಾರ ಹೋದ ಒಡನೆಯೇ ಅದು ನಷ್ಟವಾಗುವುದು. ಆದರೆ ಸನ್ನಡತೆಯಿಂದ ಪ್ರಾಪ್ತವಾದ ಘನತೆ ಮಾತ್ರವೇ ಶಾಶ್ವತವಾಗಿ ಉಳಿಯುತ್ತದೆ. ಎಂತಹ ವಜ್ರಾಘಾತವೂ ಅದನ್ನು ನಾಶಮಾಡಲಾರದು.

ಚಾರಿತ್ರ್ಯ ಮೂರು ಸ್ತಂಭಗಳ ಮೇಲೆ ನಿಂತಿದೆ: **೧. ಕಾರ್ಯಕುಶಲತೆ ೨. ನಿರ್ಭಯತೆ** ಮತ್ತು **೩. ನಿಸ್ವಾರ್ಥತೆ**. ಚಾರಿತ್ರ್ಯವಂತ ವ್ಯಕ್ತಿಯಲ್ಲಿ ಆಲಸ್ಯವಿರುವುದಿಲ್ಲ. ಅವನು ಸದಾಕಾಲವೂ ಉದ್ಯಮಶೀಲನಾಗಿರುತ್ತಾನೆ. ಯಾವ ಕೆಲಸವೂ ಅವನಿಗೆ ಅಸಾಧ್ಯವೆನಿಸುವುದಿಲ್ಲ. ಅವನಿಗೆ ಯಾವ ರೀತಿಯ ಭಯವೂ ಇರುವುದಿಲ್ಲ. ಅವನು ಅನ್ಯಾಯದ ಮುಂದೆ ತಲೆಬಾಗುವುದಿಲ್ಲ. ಅವನಲ್ಲಿ ಸಾಹಸದ ಗುಣ ಎಷ್ಟು ತುಂಬಿಕೊಂಡಿರುತ್ತದೆ ಎಂದರೆ, ನ್ಯಾಯ ಮತ್ತು ಸತ್ಯಗಳ ರಕ್ಷಣೆಗಾಗಿ ಅವನು ಎಂತಹ ಅಪಾಯವನ್ನು ಎದುರಿಸಲೂ ಹಿಂದೆ ಸರಿಯುವುದಿಲ್ಲ. ಇತರರಿಗಾಗಿ ಜೀವಿಸುವ ಮನೋಭಾವ, ಸರ್ವಜೀವಭೂತಗಳಲ್ಲಿ ಒಲವು ಅವನಲ್ಲಿ ತುಂಬಿಕೊಂಡಿರುತ್ತವೆ. ಇತರರಿಗೆ ನೆರವಾಗುವುದು, ಅವರ ಸೇವೆ ಮಾಡುವುದು ಮಾನವಜೀವನದ ಸಾರ್ಥಕತೆ ಎಂದು ಅವನು ಪರಿಗಣಿಸುತ್ತಾನೆ.

ಇಲ್ಲಿ ಒಂದು ಪ್ರಶ್ನೆ ಏಳಬಹುದು. ಒಬ್ಬ ವ್ಯಕ್ತಿ ಕೇವಲ ಬೇರೆಯವರಿಗೆ ಮಾತ್ರ ಜೀವಿಸಿದರೆ ಅವನ ಕುಟುಂಬವನ್ನು ಯಾರು ತಾನೆ ನೋಡಿಕೊಳ್ಳುತ್ತಾರೆ? ಇದಕ್ಕೆ ಉತ್ತರ ಇಷ್ಟೆ: ಯಾವ ವ್ಯಕ್ತಿಯು ಸಂಪೂರ್ಣವಾಗಿ ಇತರರಿಗೋಸ್ಕರವಾಗಿ ಜೀವಿಸುತ್ತ ಇರುತ್ತಾನೋ ಅವನಿಗೆ ತನ್ನ ಕುಟುಂಬದ ಬಗ್ಗೆ ಚಿಂತೆ ಮಾಡುವ ಅಗತ್ಯವೇ ಇರುವುದಿಲ್ಲ. ಅವನ ಕುಟುಂಬದ ನಿರ್ವಹಣೆ ತಾನಾಗಿಯೇ ನಡೆಯುತ್ತದೆ. ಕರ್ಮದ ಅಚಲ ಸಿದ್ಧಾಂತವನ್ನು ಇಲ್ಲಿ ನಾವು ಕಾಣಬಹುದು. ಯಾರು ಸಂಪೂರ್ಣವಾಗಿ ಬೇರೆಯವರಿಗೆ ತನ್ನ ಜೀವನವನ್ನು ನೀಡಲು ಇನ್ನೂ ಅಸಮರ್ಥನಾಗಿರುವನೋ, ಅವನು ಇತರರಿಗಾಗಿ ಸ್ವಲ್ಪ ಸಮಯವನ್ನಾದರೂ ಮುಡಿಪಾಗಿ ಇಡಬೇಕು. ಅದೇ ಅವನ ಚಾರಿತ್ರ್ಯವನ್ನು ನಿರ್ಮಲವಾಗುವಂತೆ ಮಾಡುತ್ತದೆ. ಚಾರಿತ್ರ್ಯವನ್ನು ಪವಿತ್ರವನ್ನಾಗಿ ಮಾಡುವುದು, ಪರಿಶುದ್ಧವನ್ನಾಗಿ ಮಾಡುವುದು ಬೇರೆ ಏನೂ ಅಲ್ಲ, ನಿಸ್ವಾರ್ಥತೆ. ವ್ಯಕ್ತಿಯೊಬ್ಬನು ಕರ್ಮಕುಶಲಿಯೂ ನಿರ್ಭಯನೂ ಆಗಿರಬಹುದು. ಆದರೆ ಅವನು ತನ್ನ ಸ್ವಾರ್ಥದಲ್ಲಿಯೇ ಮುಳುಗಿದ್ದರೆ, ಅವನ ಸ್ವಂತಕ್ಕೆ ಅಥವಾ ಅವನ ಕುಟುಂಬಕ್ಕೆ ಪ್ರಯೋಜನವಾಗಬಹುದೇ ವಿನಾ, ಸಮಾಜಕ್ಕೆ ಅವನಿಂದ ಯಾವ ಉಪಯೋಗವೂ ಆಗುವುದಿಲ್ಲ. ಚಾರಿತ್ರ್ಯವು ನಿಸ್ವಾರ್ಥವೆಂಬ ಒರೆಗಲ್ಲಿನ ಪರೀಕ್ಷೆಗೆ ಒಳಪಟ್ಟಾಗ ಮಾತ್ರ ಅದರಲ್ಲಿ ಸ್ವಚ್ಛತೆ ಅಥವಾ ಪರಿಶುದ್ಧತೆ ಉತ್ಪನ್ನವಾಗುತ್ತದೆ. ಇಂತಹ ವ್ಯಕ್ತಿಯೇ ಸಮಾಜದ, ದೇಶದ ಸೇವೆಗೆ ಉಪಯುಕ್ತ ಸಾಧನವಾಗುತ್ತಾನೆ.

> **ಒಬ್ಬ ವ್ಯಕ್ತಿಯಲ್ಲಿ ಉನ್ನತ ನೈತಿಕ ಪ್ರಜ್ಞೆ ಎಚ್ಚೆತ್ತಿದ್ದರೂ ಅವನು ದೌರ್ಬಲ್ಯವಶನಾಗಿ ವ್ಯಾಮೋಹಗಳ ದಾಸನಾಗಿದ್ದರೆ ಅವನಲ್ಲಿ ತೀವ್ರವಾದ ವೈಷಮ್ಯ, ಸಂಘರ್ಷಗಳು ಉಂಟಾಗುತ್ತವೆ. ಅವನ ವ್ಯಕ್ತಿತ್ವವು ಸಮತ್ವವನ್ನು ಕಳೆದುಕೊಳ್ಳುತ್ತದೆ, ವಿಚ್ಛಿದ್ರವಾಗುತ್ತದೆ. ...ನಮ್ಮ ಚಿಂತನೆ, ಭಾವನೆ ಮತ್ತು ಇಚ್ಛೆ – ಇವುಗಳನ್ನು ಸಮನ್ವಯಗೊಳಿಸಲು ಪ್ರಯತ್ನಿಸಬೇಕು... ನಾವು ಇವೆಲ್ಲವನ್ನೂ ಹದವಾಗಿ ಒಂದುಗೂಡಿಸಬೇಕು. ..ಅನಾಸಕ್ತ ಭಾವನೆಯಿಂದ ನಮ್ಮ ವಿವಿಧ ಸಾಮರ್ಥ್ಯಗಳನ್ನು ಒಂದುಗೂಡಿಸಿ ಅವು ಉನ್ನತ ಧ್ಯೇಯಕ್ಕಾಗಿ ಸಹಕಾರದಿಂದ ಕೆಲಸ ಮಾಡುವಂತೆ ಮಾಡಬಹುದು. ಇದೊಂದು ದೊಡ್ಡ ಸಾಧನೆ.** – ***ಸ್ವಾಮಿ ಯತೀಶ್ವರಾನಂದ***
> (ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ, ಪುಟ ೨೧೧–೨೧೨)

ಸಚ್ಚಾರಿತ್ರ್ಯವು ಮಾನವನ ಬೆನ್ನಿನ ಮೂಳೆಯ ಹಾಗೆ ಎಂದು ಹೇಳುತ್ತಾರೆ. ಬೆನ್ನುಮೂಳೆ ದುರ್ಬಲವಾಗಿದ್ದರೆ, ದೋಷಯುಕ್ತವಾಗಿದ್ದರೆ ಮನುಷ್ಯ ಅಂಗವಿಕಲನಾಗುತ್ತಾನೆ; ಅಸಮರ್ಥನಾಗುತ್ತಾನೆ. ಹಾಗೆಯೇ ಚಾರಿತ್ರ್ಯಹೀನ ವ್ಯಕ್ತಿಯ ವ್ಯಕ್ತಿತ್ವವು ಕೂಡ ಟೊಳ್ಳಾಗಿರುತ್ತದೆ.

ಚಾರಿತ್ರ್ಯವಂತ ವ್ಯಕ್ತಿಗಳ ಸಂಖ್ಯೆಯು ಯಾವ ದೇಶದಲ್ಲಿ ಅಧಿಕವಾಗಿರುತ್ತದೆಯೋ, ಜೀವನದ ಎಲ್ಲ ಕ್ಷೇತ್ರಗಳಲ್ಲಿ ಅಷ್ಟು ಸಮೃದ್ಧಿಯನ್ನು ಆ ದೇಶವು ಪಡೆಯುತ್ತದೆ. ದೇವಸ್ಥಾನಕ್ಕೆ ಹೋಗುವುದು, ಪೂಜೆ ಪಾರಾಯಣಗಳನ್ನು ಮಾಡುವುದು – ಇವನ್ನೂ ಚಾರಿತ್ರ್ಯದ ಒರೆಗಲ್ಲಿನ ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ. ಅವುಗಳ ಹಿನ್ನೆಲೆಯಲ್ಲಿ ಸ್ವಾರ್ಥಮನೋಭಾವ ಮತ್ತು ಆಡಂಬರ ಇಲ್ಲದಿದ್ದರೆ, ಹೆಚ್ಚೆಂದರೆ ಅವು ಚಾರಿತ್ರ್ಯವನ್ನು ವ್ಯಕ್ತಪಡಿಸುವ ಸಾಧನಗಳಾಗಬಹುದಷ್ಟೆ. ನಾವು ಮಾಡುವ ಬಹುಪಾಲು ಧಾರ್ಮಿಕ ಕ್ರಿಯೆಗಳು ನಮ್ಮ ಸ್ವಾರ್ಥವನ್ನು ತೃಪ್ತಿಪಡಿಸಿಕೊಳ್ಳುವ ಸಾಧನಗಳಾಗಿಯೇ ಉಳಿದುಬಿಡುತ್ತವೆ. ಇದು ದುಃಖದ ವಿಷಯ. ಇದರಿಂದಾಗಿ ನಮ್ಮ ಚಾರಿತ್ರ್ಯವರ್ಧನೆಗೆ ಧಕ್ಕೆ ತಗಲುತ್ತದೆ.

### ಚಾರಿತ್ರ್ಯದ ವ್ಯಾಪಕತೆ

ಛಾಂದೋಗ್ಯ ಉಪನಿಷತ್ತಿನಲ್ಲಿ ಭಗವತ್ತತ್ತ್ವವನ್ನು 'ಭೂಮಾ' ಎಂದು ಹೆಸರಿಸಿದೆ. ವ್ಯಾಪಕ ದೃಷ್ಟಿಯಲ್ಲಿ ಇದರ ಅರ್ಥ, 'ಮಹಾನ್' ಎಂದು. ನಾವು ಭಗವಂತನನ್ನು ನಮ್ಮ ಸಂಕೀರ್ಣ ಧರ್ಮ, ಸಂಪ್ರದಾಯಗಳು ಹಾಗೂ ಮನಸ್ಸಿನ ಆಧಾರದ ಮೇಲೆ ಸೀಮಿತಗೊಳಿಸಬಾರದು. ಭಗವಂತನು ಮಹಾನ್ ಅಂದರೆ ಅನಂತನಾಗಿದ್ದಾನೆ. ಅವನ ಅನಂತತೆಯಲ್ಲಿ ಎಲ್ಲವೂ ಸಂಮಿಲಿತವಾಗಿದೆ. ಆದರೆ ಭಗವಂತನು ಅನಂತನೆಂದು ಹೇಳುವ ಮರುಕ್ಷಣದಲ್ಲಿಯೇ, ಅವನನ್ನು ಕ್ರೈಸ್ತರವನು, ಮುಸಲ್ಮಾನನು ಅಥವಾ ಹಿಂದೂ ಎಂದು ನಮ್ಮ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇವೆ. ಭಗವಂತನು ಮಹಾನ್ – ಅನಂತ ಎಂದರೆ ಅವನು ಎಲ್ಲ ವಸ್ತುಗಳಿಗಿಂತ ಅನಂತನಾದವನು ಎಂದರ್ಥ. ಅವನು ಸಮುದ್ರಕ್ಕಿಂತ ಮಹಾನ್, ಆಕಾಶಕ್ಕಿಂತ ಮಹಾನ್, ಮನಸ್ಸಿಗಿಂತ ಮಹಾನ್, ಜೀವನಕ್ಕಿಂತ ಶ್ರೇಷ್ಠನಾದವನು, ಮೃತ್ಯುವಿಗಿಂತ ಅತೀತನು, ನಮಗೆ ಗೊತ್ತಿರುವ ಎಲ್ಲ ವಸ್ತುಗಳಿಗಿಂತಲೂ ಹಿರಿದಾದವನು.

ಭಗವಂತನು ಮಾನವ ಇತಿಹಾಸವನ್ನು ಮಾತ್ರವೇ ಪ್ರವರ್ತಿಸಿರುವನೆಂದು ನಾವು ಹೇಳಲಾಗುವುದಿಲ್ಲ; ಕೇವಲ ಒಂದು ವಿಶೇಷ ಸಮುದಾಯವನ್ನು ಮಾತ್ರವೇ ಅವನು ಉದ್ಧಾರ ಮಾಡುವನೆಂದು ಕೂಡ ಹೇಳಲಾಗುವುದಿಲ್ಲ. ಕಾಲದಲ್ಲಿ ಅಂತರ್ಗತವಾಗುವ ಸಮಸ್ತ ಘಟನೆಗಳು ಹಾಗೂ ಐತಿಹಾಸಿಕ ವಿಶಿಷ್ಟತೆಗಳಿಗೆ ಭಗವಂತನೇ ಜವಾಬ್ದಾರ ಎನ್ನುವುದೇನೋ ನಿಜ. ಆದರೆ ಅಷ್ಟರಲ್ಲಿಯೇ ಅವನ ಮಹಾತ್ಮೆ ಕೊನೆಗೊಳ್ಳುವುದಿಲ್ಲ. ಅವನು ಅವಿನಾಶಿ. ಅವನು ಕಾಲಕ್ಕಿಂತ, ಇತಿಹಾಸಕ್ಕಿಂತ, ನಮ್ಮ ಮತಸಂಪ್ರದಾಯಗಳಿಗಿಂತ ಮತ್ತು ಎಲ್ಲ ಧರ್ಮಗ್ರಂಥಗಳಿಗಿಂತ ಶ್ರೇಷ್ಠನಾದವನು. ಭಗವಂತನನ್ನು ಈ ರೀತಿಯಾಗಿ ಚಿಂತಿಸಿದರೆ ಮಾತ್ರ ನಮ್ಮ ವ್ಯಕ್ತಿತ್ವದಲ್ಲಿ ಚಾರಿತ್ರ್ಯವು ತನ್ನ ಯಥಾರ್ಥ ಭವ್ಯತೆಯ ರೂಪದಲ್ಲಿ ಅರಳಿ ನಿಲ್ಲುತ್ತದೆ.

ಕೆಲವರ್ಷಗಳ ಮಟ್ಟಿಗೆ ನಾವು ಧಾರ್ಮಿಕ ಜೀವನವನ್ನು ನಡೆಸಲು ಪ್ರಯತ್ನಿಸುತ್ತೇವೆ. ಆದರೆ ಅದು ನಮ್ಮ ಆಧ್ಯಾತ್ಮಿಕ ದೃಷ್ಟಿಕೋನವನ್ನು ಉದಾರ ದೃಷ್ಟಿಯನ್ನಾಗಿ ಮಾಡುವುದಿಲ್ಲ. ಇದಕ್ಕೆ ಕಾರಣ ಭಗವಂತನ ಬಗೆಗಿನ ನಮ್ಮ ಧೋರಣೆ ಸಂಕುಚಿತ ಮತ್ತು ಸಾಂಪ್ರದಾಯಿಕವಾಗಿರುತ್ತದೆ. ಇದರಿಂದ ನಮ್ಮ ನಡತೆಯಲ್ಲಿ ಯಾವ ಪರಿವರ್ತನೆಯೂ ಆಗುವುದಿಲ್ಲ. ನಾವು ಹೇಗೆ ಸೀಮಿತ ಮನುಷ್ಯರಾಗಿ ಹುಟ್ಟಿರುತ್ತೇವೆಯೋ, ಹಾಗೆಯೇ ಜೀವನಪರ್ಯಂತ ಇದ್ದುಬಿಡುತ್ತೇವೆ. ನಾವು ಧಾರ್ಮಿಕರೆಂದು ಹೇಳಿಕೊಳ್ಳುತ್ತೇವೆ, ಆದರೆ ನಮ್ಮ ಹೃದಯ ವಿಕಾಸವಾಗಿರುವುದಿಲ್ಲ. ಆದ್ದರಿಂದ ನಾವು ಮಾಡಬೇಕಾದುದು ಏನೆಂದರೆ ಅನಂತರೂಪನಾದ ಮಹಾನ್‌ಸ್ವರೂಪಿಯಾದ ಭಗವಂತನ ಚಿಂತನೆ. ಆ ಮೂಲಕ ಅವನ ಮಹಾತ್ಮೆಯಲ್ಲಿ ನಾವೂ ಪಾಲುಗಾರರಾಗಬೇಕು. ಮಹಾತ್ಮೆ ಅಥವಾ ಅನಂತದ ಅರ್ಥವೇನು ಗೊತ್ತೆ? ಆಧ್ಯಾತ್ಮಿಕ ಪರಿಪೂರ್ಣತೆ; ಅಜ್ಞಾನ, ಸಂಕುಚಿತತೆ, ಮತಾಂಧತೆ ಮತ್ತು ದ್ವೇಷಗಳಿಂದ ಸಂಪೂರ್ಣ ಮುಕ್ತಿ; ರಾಗ ಮತ್ತು ಪಕ್ಷಪಾತ ಭಾವನೆಗಳಿಂದ ಬಿಡುಗಡೆ.

> **"ಹೇ ಪ್ರಭು, ನೀನು ನನ್ನನ್ನು ಶಾಂತಿಯ ಒಂದು ಯಂತ್ರವನ್ನಾಗಿ ಮಾಡು; ಎಲ್ಲಿ ತಿರಸ್ಕಾರ ಮೂಡುವುದೋ ಅಲ್ಲಿ ಪ್ರೇಮವನ್ನು ನೀಡುವಂತೆ ಮಾಡು; ಎಲ್ಲಿ ಆಘಾತಗಳು ಬೀಳುತ್ತವೆಯೋ ಅಲ್ಲಿ ಕ್ಷಮೆ, ಎಲ್ಲಿ ಸಂಶಯವಿದೆಯೋ ಅಲ್ಲಿ ವಿಶ್ವಾಸ, ಎಲ್ಲಿ ನಿರಾಶೆಯಿದೆಯೋ ಅಲ್ಲಿ ಆಸೆ, ಎಲ್ಲಿ ಕತ್ತಲಿದೆಯೋ ಅಲ್ಲಿ ಬೆಳಕು ಮತ್ತು ಎಲ್ಲಿ ಉದಾಸೀನತೆ ಇದೆಯೋ ಅಲ್ಲಿ ಪ್ರಸನ್ನತೆ ಉಂಟಾಗುವಂತೆ ಮಾಡು."** –ಸಂತ ಫ್ರಾನ್ಸಿಸ್

ನಮ್ಮ ಚಾರಿತ್ರ್ಯವನ್ನು ಉದಾರವನ್ನಾಗಿ ಮಾಡಿಕೊಳ್ಳಲು ಇದೇ ಸಾಧನಾಮಾರ್ಗವಾಗಿದೆ. ನಮ್ಮಲ್ಲಿ ಧೈರ್ಯ ಮತ್ತು ಸತತ ಪ್ರಯತ್ನಗಳಿದ್ದಲ್ಲಿ ನಿಶ್ಚಯವಾಗಿ ನಾವು ಈ ಸಾಧನೆಯಲ್ಲಿ ಸಿದ್ಧಿಯನ್ನು ಪಡೆಯಬಹುದು. ಈ ಸಿದ್ಧಿಯ ಸ್ವರೂಪವೇನು? ಅಂಥ ಸಿದ್ಧಿಯ ಸ್ಥಿತಿ ನಮಗೆ ದೊರೆತಲ್ಲಿ ಸಂತ ಫ್ರಾನ್ಸಿಸ್‌ನ ಜೊತೆಗೂಡಿ ನಾವೂ ಪ್ರಾರ್ಥಿಸಬಲ್ಲೆವು (ಬಾಕ್ಸ್ ನೋಡಿ). ತನ್ನ ಚಾರಿತ್ರ್ಯವನ್ನು ನಿರ್ಮಾಣ ಮಾಡಿಕೊಂಡ ವ್ಯಕ್ತಿಯು ತನ್ನ ಸುತ್ತಲೂ ಅದೆಷ್ಟು ಶಾಂತಿ, ಆನಂದ, ಬಲ, ಪ್ರೇಮ ಮತ್ತು ವಿಶ್ವಾಸಗಳನ್ನು ಹರಡುತ್ತಾನೆ ಎನ್ನುವುದನ್ನು ವಿಚಾರ ಮಾಡಿನೋಡಿ. ಇದೇ ನಿಜವಾದ ಸಮಾಜಸೇವೆ ಆಗಲಾರದೇನು!

ಪ್ರತಿಯೊಬ್ಬ ಮನುಷ್ಯ ಕೂಡ ನಿಸ್ವಾರ್ಥ ಪ್ರೇಮ ಮತ್ತು ಪವಿತ್ರತೆಯನ್ನು ಬಯಸುತ್ತಾನೆ; ಶಾಂತಿ ಮತ್ತು ಸಹಾನುಭೂತಿಗಳಿಗಾಗಿ ಹಾತೊರೆಯುತ್ತಾನೆ. ಇವುಗಳನ್ನು ಕೇವಲ ವಿಜ್ಞಾನ ಅಥವಾ ತಂತ್ರಜ್ಞಾನಗಳ ಯಶಸ್ಸಿನಿಂದ ಪಡೆಯಲಾಗುವುದಿಲ್ಲ; ಅವು ರಾಜಕೀಯ ನೀತಿಗಳಿಂದ ಅಥವಾ ಸಂಧಿ ಒಪ್ಪಂದಗಳಿಂದ ಗಳಿಸುವಂಥವುಗಳಲ್ಲ. ಉದಾರಚರಿತರಾದ ಶ್ರೇಷ್ಠ ಮಹಾಪುರುಷರ ಸಾನ್ನಿಧ್ಯವು ಎಂದು ಸಮಾಜಕ್ಕೆ ದೊರಕುವುದೋ ಅಂದು ಆ ಮೌಲ್ಯಗಳು ಸಮಾಜದಲ್ಲಿ ಹರಡುತ್ತವೆ. ಅಂತಹ ಮಹಾಪುರುಷರ ಶೀಲವು ನಿರ್ಮಲವಾಗಿರುತ್ತದೆ ಹಾಗೂ ಅವರ ನಡೆನುಡಿಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ವಿದ್ವಾಂಸರು ಮತ್ತು ರಾಜನೀತಿಜ್ಞರಿಗಿಂತಲೂ ಹೆಚ್ಚಾಗಿ ಇಂಥ ಪವಿತ್ರಚಾರಿತ್ರ್ಯದ ಸ್ತ್ರೀ–ಪುರುಷರು ಇಂದು ಸಮಾಜಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಬೇಕಾಗಿದ್ದಾರೆ.

ಹೀಗಾಗಿ ನಮ್ಮ ನಡತೆಯನ್ನು ವಿಕಾಸಮಾಡಿಕೊಳ್ಳುವ ಸಾಧನೆಯಲ್ಲಿ, ತುಂಬು ಬಯಕೆ, ಉತ್ಸಾಹ ಮತ್ತು ಧೈರ್ಯಗಳಿಂದ ಕಾರ್ಯತತ್ಪರರಾಗಬೇಕು. ಇದರ ಸಫಲತೆಯಿಂದ ನಮಗೊಬ್ಬರಿಗೆ ಮಾತ್ರವೇ ಒಳ್ಳೆಯದಾಗುವುದಿಲ್ಲ, ನಮ್ಮ ನೆರೆಹೊರೆಯ ಜನರಿಗೆ, ಮಿತ್ರರಿಗೆ, ಒಡನಾಡಿಗಳಿಗೆ ಮತ್ತು ಒಟ್ಟಾರೆ ಸಮಾಜಕ್ಕೆ ಇದೊಂದು ವರದಾನವಾಗುವುದು. ಉದಾರಚಾರಿತ್ರ್ಯವೆಂಬುದು ಅಷ್ಟೊಂದು ಮಹತ್ವದ್ದು. ನಾವು ಅದನ್ನು ಹೀಗೆಯೇ ಎಂದು ವ್ಯಾಖ್ಯಾನ ಮಾಡಲಾರೆವು. ಆದರೆ ಅದನ್ನು ಸಹಜವಾಗಿಯೇ ನಾವು ಭಾವಿಸಿಕೊಳ್ಳಬಲ್ಲೆವು ಮತ್ತು ಪ್ರಯತ್ನ ಮಾಡಿದರೆ, ನಮ್ಮ ಜೀವನದಲ್ಲಿಯೂ, ಅದನ್ನು ಅಳವಡಿಸಿಕೊಳ್ಳಲು ಶಕ್ತರಾಗುವೆವು. ಇಂತಹ ಮಹಾನ್ ವ್ಯಕ್ತಿಗಳೇ, **ವಸುಧೈವ ಕುಟುಂಬಕಮ್** (ಇಡೀ ಭೂಮಿಯೇ ಒಂದು ಕುಟುಂಬ) ಎಂಬ ಧ್ಯೇಯವಾಕ್ಯದ ಆಧಾರಸ್ತಂಭಗಳಾಗಿ ನಿಲ್ಲುತ್ತಾರೆ. ★